ವಿಜಯ ಕರ್ನಾಟಕ

Monday, November 29th, 2010



## ಸಂಜೆ ಕ್ಲಾಸಿನಲ್ಲಿ ಓದಿ

# ನಿಮ್ಮ ಕನಸು ಜಿಗಿಯಲಿ ಬಾನೆತ್ತರಕ್ಕೆ



**ಬಾಹ್ಯಾಕಾಶ ಕ್ಷೇತ್ರದಲ್ಲಿ ಎಂ.ಎಸ್ ಮಾಡೋಕೆ ಸಮಯ ಇಲ್ಲ ಅಂತ ಬೇಸರಿಸಬೇಡಿ. ಅದಕ್ಕಾಗಿಯೇ ಜೈನ್ ವಿವಿ ಸಂಜೆಯ ಕ್ಲಾಸುಗಳನ್ನು ಆರಂಭಿಸಿದೆ.**

• ಪ್ರಮುಖ

ಬಾಹ್ಯಾಕಾಶ ಸಂಶೋಧನೆ ಇಂದು ಉತ್ತುಂಗದಲ್ಲಿದೆ. ಭುವಿಯಿಂದ ಬಾನಿಗೆ ಹಾರಿರುವ ಮನುಷ್ಯ ಅಲ್ಲಿನ ಪ್ರಪಂಚದ ಗುಟ್ಟುಗಳನ್ನು ಬಿಚ್ಚಿಡುವ ಯತ್ನದಲ್ಲಿದ್ದಾನೆ. ಹೀಗಾಗಿ ಬಾಹ್ಯಕಾಶ ಕ್ಷೇತ್ರ ಅಪಾರ ನಿರೀಕ್ಷೆಗಳನ್ನು ಹುಟ್ಟುಹಾಕುತ್ತಿದೆ. ಬಾಹ್ಯಾಕಾಶ ಕ್ಷೇತ್ರಕ್ಕೆ ಸಂಬಂಧಿಸಿದ ಕೋರ್ಸುಗಳು ಎಲ್ಲ ವಿಶ್ವವಿದ್ಯಾಲಯಗಳಲ್ಲಿ ದೊರೆಯಲಿಕ್ಕಿಲ್ಲ. ದೇಶದ ಆಯ್ದ ವಿವಿಗಳಲ್ಲಿ ಮಾತ್ರ ಬಾಹ್ಯಾಕಾಶ ವಿಷಯದಲ್ಲಿ ಎಂ.ಎಸ್ ಮಾಡಲು ಅವಕಾಶವಿದೆ. ಅವುಗಳಲ್ಲಿ ಜೈನ್ ವಿವಿ ಕೂಡ ಒಂದು. ಬಾಹ್ಯಾಕಾಶ ಕ್ಷೇತ್ರದ ಅನೇಕ ಮಗ್ಗುಲುಗಳನ್ನು ಪರಿಚಯಿಸಿಕೊಡುವ ನಿಟ್ಟಿನಲ್ಲಿ ವಿಷಯಗಳನ್ನು ಇಲ್ಲಿ ಅಧ್ಯಯನಕ್ಕೆ ಅಳವಡಿಸಲಾಗಿದೆ.

ಒಂದು ಸಮೀಕ್ಷೆಯಂತೆ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಅಥವಾ ಸಂಶೋಧನೆ ಮತ್ತು ಅಭಿವೃದ್ಧಿ ವಲಯದಲ್ಲಿರುವ ಅಭ್ಯರ್ಥಿಗಳು ಇನ್ನೂ ಹೆಚ್ಚಿನ ಕೆರಿಯರ್ ಅವಕಾಶಗಳನ್ನು ಹೊಂದಲು ಬಯಸುತ್ತಾರೆ. ಅದೂ ಸಹ ವಿಶಿಷ್ಟವಾದ ಕ್ಷೇತ್ರದಲ್ಲಿ. ಅಂತವರಿಗೆ ಅತಿ ಸೂಕ್ತವಾಗಿದ್ದುದು ಬಾಹ್ಯಾಕಾಶ ಕ್ಷೇತ್ರ. ಸಾಮಾನ್ಯ ಮಾಸ್ಟರ್ ಪ್ರೋಗ್ರಾಮ್‌ಗಳಿಗಿಂತ ಭಿನ್ನವಾಗಿರುವ ಕೋರ್ಸ್ ಇದು.

ಎಂಜಿನಿಯರಿಂಗ್ ಕ್ಷೇತ್ರದವರಿಗಾಗಿಯೇ ಮೀಸಲಾಗಿರುವ ಕೋರ್ಸ್ ಆಗಿದ್ದರಿಂದ ವೃತ್ತಿನಿರತರೇ ಹೆಚ್ಚು. ಹೀಗಾಗಿ ಅವರಿಗೆ ಸಂಜೆಯ ವೇಳೆ ಅನುಕೂಲ. ಇವುಗಳನ್ನು ಗಮನದಲ್ಲಿಟ್ಟುಕೊಂಡು ಸಂಜೆಯ ಕ್ಲಾಸುಗಳನ್ನು ರೂಪಿಸಿದೆ ಜೈನ್ ವಿವಿ. ಇದು ದೇಶದಲ್ಲಿಯೇ ಪ್ರಥಮ ಯತ್ನ.

ಅಲ್ಲಿ ಲಭ್ಯವಿರುವ ಎಂ.ಎಸ್ ಕೋರ್ಸ್‌ಗಳು ಯಾವುದು ಗೊತ್ತಾ? ಐದು ಪ್ರಮುಖ ಕೋರ್ಸ್‌ಗಳು ಇಲ್ಲಿವೆ. ಅವುಗಳೆಂದರೆ, ಏರೋಡೈನಮಿಕ್ಸ್, ಏರೋಸ್ಟ್ರಕ್ಚರ್ಸ್, ಪ್ರೊಪಲ್ಷನ್, ಏವಿಯೊನಿಕ್ಸ್, ಮ್ಯಾನ್ಯುಫ್ಯಾಕ್ಚರಿಂಗ್ ಅಂಡ್ ಮೆಂಟೆನೆನ್ಸ್ ಮ್ಯಾನೇಜ್‌ಮೆಂಟ್. ಇವುಗಳ ಅವಧಿ 2 ವರ್ಷಗಳ ನಾಲ್ಕು ಸೆಮಿಸ್ಟರ್‌ನ ಹಾಗೂ 4 ವರ್ಷಗಳ 8 ಸೆಮಿಸ್ಟರ್‌ಗಳು. ಆಯಾ ಕ್ಷೇತ್ರಗಳಲ್ಲಿ ವಿಶೇಷ ತರಬೇತಿ ನೀಡುವುದು ಈ ಕೋರ್ಸ್‌ಗಳ ಉದ್ದೇಶ. ■



### ಅರ್ಹತೆ

ಪದವಿ ಕೋರ್ಸ್‌ನಲ್ಲಿ ಕನಿಷ್ಠ ಶೇ.60 ಅಂಕ ಹಾಗೂ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಾದರೆ ಶೇ.55 ಅಂಕ ಗಳಿಸಿದರೆ ಈ ಕೋರ್ಸ್‌ಗೆ ಪ್ರವೇಶ ಪಡೆಯಬಹುದು. ಜತೆಗೆ ಕನಿಷ್ಠ 2 ವರ್ಷಗಳ ಕೆಲಸದ ಅನುಭವ ಅಗತ್ಯ. ಅಲ್ಲದೇ ಆಯಾ ಸಂಸ್ಥೆಗಳಿಂದ ಪ್ರಾಯೋಜಿತರಾಗಿ ನೇಮಿಸಲ್ಪಡಬೇಕು.

### ಪ್ರವೇಶ ಹೇಗೆ?

ಕೋರ್ಸ್‌ನಲ್ಲಿ ಇದರಲ್ಲಿ ಕೋರ್ ವಿಷಯ, ಪ್ರೊಫೆಷನಲ್ ಕೋರ್ಸ್ ಹಾಗೂ ಥಿಸೀಸ್‌ಗಳು ಅಡಕವಾಗಿವೆ. ಪ್ರವೇಶ ಪರೀಕ್ಷೆ, ಅಸೈನ್‌ಮೆಂಟ್, ಸೆಮಿನಾರ್‌ಗಳ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

10, ಜನವರಿ 2011 ರೊಳಗೆ ಅರ್ಜಿ ಸಲ್ಲಿಸಬೇಕು. ಕೌನ್ಸಲಿಂಗ್ ಜನವರಿ 16 ರಂದು ಬೆಳಗ್ಗೆ 10 ಕ್ಕೆ ಜೆ.ಸಿ.ರಸ್ತೆಯ ಜೈನ್ ವಿಶ್ವವಿದ್ಯಾಲಯದಲ್ಲಿ ನಡೆಯಲಿದೆ. ಪ್ರವೇಶಕ್ಕೆ ಜನವರಿ 25 ಕೊನೆಯ ದಿನ.

ಹೆಚ್ಚಿನ ಮಾಹಿತಿಗೆ ಕನಕಪುರ ರಸ್ತೆಯಲ್ಲಿರುವ ಜೈನ್ ಗ್ಲೋಬಲ್ ಕ್ಯಾಂಪಸ್ ಅನ್ನು ಸಂಪರ್ಕಿಸಬಹುದು.